ಮೈಸೂರು ವಿಶ್ವವಿದ್ಯಾನಿಲಯ

# ಯುವರಾಜ ಕಾಲೇಜು

(ವಿಶ್ವವಿದ್ಯಾನಿಲಯದ ಸಾಮರ್ಥ್ಯವರ್ಧಿತ ಉತ್ಕೃಷ್ಟಜ್ಞಾನ ಸ್ವಾಯತ್ತತಾ ಕಾಲೇಜು)
ಜೆ.ಎಲ್.ಬಿ.ರಸ್ತೆ ಮೈಸೂರು-570 005.ಕರ್ನಾಟಕ ಭಾರತ

**ನಂ.ಯು.ಕಾ.ಮೈ/ಸ್ನಾತಕ/ 660 /2024-25** **ದಿನಾಂಕ: 24-07-2024**

## ಪ್ರಕಟಣೆ

**ವಿಷಯ: 2024-25ನೇ ಶೈಕ್ಷಣಿಕ ಸಾಲಿನ ದ್ವಿತೀಯ ಮತ್ತು ತೃತೀಯ ಬಿ.ಎಸ್ಸಿ., ಬಿ.ಸಿ.ಎ. ಮತ್ತು ಬಿ.ಬಿ.ಎ. ಕೋರ್ಸಿನ ಪ್ರವೇಶಾತಿ ಬಗ್ಗೆ.**

2022-23ನೇ ಮತ್ತು 2023-24ನೇ ಸಾಲಿನಲ್ಲಿ ಪ್ರವೇಶಾತಿಯಾಗಿರುವ ಎಲ್ಲಾ ಸ್ನಾತಕ ಕೋರ್ಸಿನ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ತಿಳಿಸುವುದೇನೆಂದರೆ ಸ್ಕೀಂ-ಬಿ ಅಡಿಯಲ್ಲಿ ಪ್ರವೇಶಾತಿ ಪಡೆಯುವಾಗ ಮೊದಲನೇ ಕಂತನ್ನು ಪಾವತಿಸಿರುವ ವಿದ್ಯಾರ್ಥಿಗಳು ಬಾಕಿ ಇರುವ ಎರಡನೇ ಕಂತಿನ ಪ್ರವೇಶಾತಿ ಶುಲ್ಕವನ್ನು ಹಾಗೂ ತಾವು ವ್ಯಾಸಂಗ ಮಾಡಿರುವ ವರ್ಷಗಳ ಯಾವುದೇ ಬಾಕಿ ಪ್ರವೇಶಾತಿ ಶುಲ್ಕಗಳನ್ನು ಪೂರ್ಣವಾಗಿ ಕಾಲೇಜಿನ ಜಿ.ಆರ್.ಎ. ಖಾತೆಗೆ ಪಾವತಿಸಿದ ನಂತರ 2024-25ನೇ ಶೈಕ್ಷಣಿಕ ಸಾಲಿನ ದ್ವಿತೀಯ ಮತ್ತು ತೃತೀಯ ಬಿ.ಎಸ್ಸಿ., ಬಿ.ಸಿ.ಎ. ಮತ್ತು ಬಿ.ಬಿ.ಎ. ಕೋರ್ಸಿಗೆ ಪ್ರವೇಶಾತಿ ನೀಡಲಾಗುದವುದು.

ಸದರಿ ವಿದ್ಯಾರ್ಥಿಗಳು ಕಾಲೇಜಿನ ವೆಬ್‌ಸೈಟ್: www.ycm.uni-mysore.ac.inನಲ್ಲಿ ಲಭ್ಯವಿರುವ 2024-25ನೇ ಸಾಲಿನ ಪ್ರವೇಶಾತಿ ಶುಲ್ಕದ ವಿವರ ಮತ್ತು ಇನ್ನಿತರೆ ಸೂಚನೆಗಳನ್ನು ಪೂರ್ಣವಾಗಿ ತಿಳಿದುಕೊಂಡು, ಕಛೇರಿಯ ನಗದು ವಿಭಾಗದಿಂದ ಜಿ.ಆರ್.ಎ. ಖಾತೆ ಚಲನ್ ಪಡೆದು State Bank of India, University Crawford Hall Branch (0040059), Mysore ನಲ್ಲಿ 2024-25ನೇ ಸಾಲಿನ ವರ್ಷದ ಪ್ರವೇಶಾತಿ ಶುಲ್ಕವನ್ನು **ದಿನಾಂಕ:03-08-2024ರೊಳಗೆ ಪಾವತಿಸತಕ್ಕದ್ದು.** ಕಡ್ಡಾಯವಾಗಿ ಎಲ್ಲಾ ವಿದ್ಯಾರ್ಥಿಗಳು UUCMS- Student Portal ನಲ್ಲಿ 2024-25ನೇ ಸಾಲಿನಲ್ಲಿ ಪಾವತಿಸಿದ ಪ್ರವೇಶಾತಿ ಶುಲ್ಕದ ರಶೀದಿ ಪ್ರತಿಯನ್ನು Offline Payment click ಮಾಡಿ Upload ಮಾಡತಕ್ಕದು ನಂತರ ಪ್ರಿಂಟ್ ತೆಗೆದ ಅರ್ಜಿ (Application Form) ಜೋತೆಯಲ್ಲಿ ಪಾವತಿಸಿದ ಎಲ್ಲಾ ರಶೀದಿಯ ಪ್ರತಿ (College Copy)ಗಳನ್ನು ಲಗತ್ತಿಸಿ **ದಿನಾಂಕ:05-08-2024ರೊಳಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು.** ಸಲ್ಲಿಸದಿದ್ದಲ್ಲಿ ನಿಮ್ಮ ಪ್ರವೇಶಾತಿ ರದ್ದಾಯಿತೆಂದು ಪರಿಗಣಿಸಲಾಗುವುದು.

2024-25ನೇ ಸಾಲಿನ ಎಲ್ಲಾ ವರ್ಷದ ಸ್ನಾತಕ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕದ ಮೂಲ ಚಲನ್ ವಿವರವನ್ನು, ಕಾಲೇಜಿನ ಈ ಕಛೇರಿಯ ಡಿ.ಸಿ.ಬಿ. (ಜಿ.ಎಲ್-09) ಕಾರ್ಯನಿರ್ವಾಹಕರತ್ತಿರ ಬಂದು ಡಿ.ಸಿ.ಬಿ. ಪುಸ್ತಕಕ್ಕೆ ಶುಲ್ಕದ ವಿವರವನ್ನು ನೋಂದಣಿ ಮಾಡಿಸತಕ್ಕದ್ದು.

**ಪ್ರಥಮ, ದ್ವಿತೀಯ, ತೃತೀಯ, ಚತುರ್ಥ, ಐದು ಮತ್ತು ಆರನೇ ಸೆಮಿಸ್ಟರ್‌ಗಳಿಗೆ ಹಾಜರಾತಿ ಇಲ್ಲದ ಮತ್ತು ಪರೀಕ್ಷಾ ಪಾವತಿಸಿದ Dropped Out ವಿದ್ಯಾರ್ಥಿಗಳು 3ನೇ ವರ್ಷದ 6ನೇ ಸೆಮಿಸ್ಟರ್ ಮುಗಿದ ನಂತರ ಹೊಸದಾಗಿ ಆಯಾ ಸೆಮಿಸ್ಟರ್‌ಗಳಿಗೆ ಮರುಪ್ರವೇಶಾತಿ ಅಥವಾ ಮರುನೋಂದಣಿ (If applicable) ಪಡೆದು ತರಗತಿಗಳಿಗೆ ಹಾಜರಾಗಿ ಪರೀಕ್ಷೆ ತೆಗೆದುಕೊಳ್ಳುವಂತೆ ತಿಳಿಸಲಾಗಿದೆ ಹಾಗೂ ಕಾರಣಾಂತರಗಳಿಂದ ನಿಯಮಿತ ಅವಧಿಯಲ್ಲಿ ಪ್ರವೇಶಾತಿ ಆಗದಿರುವ Non-NEP ವಿದ್ಯಾರ್ಥಿಗಳು ಸಹ ಮರುಪ್ರವೇಶಾತಿ ಪಡೆದು ತರಗತಿಗಳಿಗೆ ಹಾಜರಾಗಿ ಪರೀಕ್ಷೆ ತೆಗೆದುಕೊಳ್ಳುವಂತೆ ತಿಳಿಸಲಾಗಿದೆ.**

ಕಾಲೇಜಿನ ಸೂಚನ ಫಲಕದಲ್ಲಿ ಮತ್ತು ಕಾಲೇಜಿನ ವೆಬ್‌ಸೈಟ್: www.ycm.uni-mysore.ac.in ನಲ್ಲಿ **2024-25ನೇ ಶೈಕ್ಷಣಿಕ ಸಾಲಿನ ದ್ವಿತೀಯ ಮತ್ತು ತೃತೀಯ ಬಿ.ಎಸ್ಸಿ., ಬಿ.ಸಿ.ಎ. ಮತ್ತು ಬಿ.ಬಿ.ಎ ಪ್ರವೇಶಾತಿ ಶುಲ್ಕದ ವಿವರಗಳನ್ನು ಪುಟ ಸಂಖ್ಯೆ (03)ರಲ್ಲಿ ಪ್ರಕಟಿಸಲಾಗಿದೆ.**

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ವಿವರಗಳು**

- ಈ 2024-25ನೇ ವರ್ಷದಲ್ಲಿ ಪಾವತಿಸಿರುವ ಮೂಲ ಶುಲ್ಕ ರಶೀತಿ ಪ್ರತಿ.
- ಸಂಬಂಧ ಪಟ್ಟ ಹಿಂದಿನ ವರ್ಷದಲ್ಲಿ (2022-23 & 2023-24)ನೇ ಸಾಲಿನಲ್ಲಿ ಪಾವತಿಸಿರುವ ಮೂಲ ರಶೀದಿಯ ನಕಲು ಪ್ರತಿ.
- ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನಕಲು ಪ್ರತಿ
- ಆಧಾರ್ ಕಾರ್ಡ್ ನಕಲು ಪ್ರತಿ

24/7/24

ಪ್ರಾಂಶುಪಾಲರು
ಯುವರಾಜ ಕಾಲೇಜು (ಸ್ವಾಯತ್ತ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

**2024–25ನೇ ಶೈಕ್ಷಣಿಕ ಸಾಲಿನ ದ್ವಿತೀಯ ಮತ್ತು ತೃತೀಯ ಬಿ.ಎಸ್ಸಿ., ಬಿ.ಸಿ.ಎ. ಮತ್ತು ಬಿ.ಬಿ.ಎ. ಎಲ್ಲಾ ವಿದ್ಯಾರ್ಥಿಗಳಿಗೆ ಸಂಬಂಧಿಸಿರುವ ನಿಯಮಗಳು**

1) ಈ ಕಾಲೇಜಿಗೆ ಸೇರುವ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಪ್ರೌಢರು, ಹೊಣೆಗಾರಿಕೆ ಅರಿತವರೆಂದು ಪರಿಗಣಿಸಲಾಗುತ್ತದೆ ಮತ್ತು ಅವರೆಲ್ಲರೂ ಎಲ್ಲಾ ವಿಚಾರದಲ್ಲಿ ಸಭ್ಯತೆಯಿಂದ ವರ್ತಿಸುತ್ತಾರೆಂಬುದನ್ನು ನಿರೀಕ್ಷಿಸಲಾಗುತ್ತದೆ.

2) ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಿಶ್ವವಿದ್ಯಾನಿಲಯ/ಕಾಲೇಜು, ಕಾಲಕಾಲಕ್ಕೆ ರೂಪಿಸಿ, ಪ್ರಕಟಿಸುವ ನಿಯಮ ನಿಬಂಧನೆಗಳಿಗೆ ಬದ್ಧರಾಗಿ ಅವುಗಳಿಗೆ ತಕ್ಕಂತೆ ನಡೆದುಕೊಳ್ಳಬೇಕು.

3) ಹಾಜರಾತಿಯನ್ನು 75% ಕಡ್ಡಾಯಗೊಳಿಸಲಾಗಿದೆ.

4) ವಿದ್ಯಾರ್ಥಿಗಳು ಕಾಲೇಜಿನಲ್ಲಿ ಶಿಕ್ಷಕರು, ಕಛೇರಿ ಹಾಗೂ ಗ್ರಂಥಾಲಯದ ಸಿಬ್ಬಂದಿ, ಸಹಪಾಠಿ ಹಾಗೂ ಸಾರ್ವಜನಿಕರ ವಿಷಯದಲ್ಲಿ ನಮ್ರತೆಯಿಂದ ಹಾಗೂ ಸಭ್ಯತೆಯಿಂದ ನಡೆದುಕೊಳ್ಳಬೇಕು.

5) ಕಾಲೇಜಿನ ಆವರಣ, ಗ್ರಂಥಾಲಯ, ವಾಚನಾಲಯ, ಮೊಗಸಾಲೆ, ಪ್ರಯೋಗಶಾಲೆ ಮತ್ತು ತರಗತಿ ಕೊಠಡಿಗಳನ್ನು ಮತ್ತು ಕಾಲೇಜಿನ ಆಸ್ತಿಪಾಸ್ತಿಗಳನ್ನೂ ರಕ್ಷಣೆ ಮಾಡಬೇಕು ಹಾಗೂ ಕಾಲೇಜಿನ ಆವರಣದಲ್ಲಿ ನಿಃಶಬ್ದತೆ ಮತ್ತು ಶುದ್ಧತೆ ಕಾಪಾಡಬೇಕು.

6) ಕಾಲೇಜಿನ ಆವರಣದಲ್ಲಿ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಧರಿಸಬೇಕು.

7) ರ್‍ಯಾಗಿಂಗ್ ಮತ್ತು ಅಶಿಸ್ತಿನ ಗಂಭೀರ ಚಟುವಟಿಕೆಗಳನ್ನು ತೀವ್ರವಾದ ಅಪರಾಧಗಳನ್ನಾಗಿ ಪರಿಗಣಿಸಿ ಬಿಗಿಯಾದ ಕ್ರಮಗಳನ್ನು ಜರುಗಿಸಲಾಗುವುದು.

8) ಕಾಲೇಜಿನಲ್ಲಿ ಹೊರಡಿಸುವ ಪ್ರಕಟಣೆಗಳಿಗೆ ಸಂಬಂಧಿಸಿದಂತೆ ಕಾಲೇಜಿನ ಅಥವಾ ಇಲಾಖೆಗಳ ಪ್ರಕಟಣಾ ಫಲಕವನ್ನು ಪ್ರತಿದಿನವೂ ತಪ್ಪದೆ ನೋಡಬೇಕಾದುದು ಪ್ರತಿ ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೊಣೆಗಾರಿಕೆ.

9) ವಿದ್ಯಾರ್ಥಿ/ವಿದ್ಯಾರ್ಥಿನಿಯರ ತಂದೆ ತಾಯಂದಿರು ತಮ್ಮ ಮಕ್ಕಳ ಶ್ರೇಯೋಭಿವೃದ್ಧಿಯನ್ನು ತಿಳಿಯಲು ಆಗಿಂದಾಗ್ಗೆ ಪ್ರಾಂಶುಪಾಲರನ್ನು ಹಾಗೂ ಸಂಬಂಧಪಟ್ಟ ಶಿಕ್ಷಕರನ್ನು ಭೇಟಿ ಮಾಡತಕ್ಕದ್ದು.

10) ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ತಮಗೆ ನೀಡಿದ ಕೊಠಡಿಯಲ್ಲಿ ಇತರೆ ಅನಧಿಕೃತ ವ್ಯಕ್ತಿಗಳನ್ನು ಇರಿಸಿ ಕೊಂಡಿರುವುದು ಕಂಡು ಬಂದಲ್ಲಿ ಅಂತಹ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಕಾಲೇಜು ಪ್ರವೇಶಾತಿಯನ್ನು ಕೂಡಲೆ ರದ್ದುಪಡಿಸಲಾಗುವುದು.

11) ಕಾಲೇಜಿನ ತರಗತಿಗಳಲ್ಲಿ, ಕಛೇರಿ ಹಾಗೂ ಆವರಣದಲ್ಲಿ ಮೊಬೈಲ್ ಬಳಕೆ ನಿಷೇಧವಾಗಿರುತ್ತದೆ.

12) ಕಾಲೇಜಿನ ಆವರಣದಲ್ಲಿ ಧೂಮಪಾನ, ಮಾದಕ ಪದಾರ್ಥಗಳ ಸೇವನೆ ಸಂಪೂರ್ಣ ನಿಷೇಧಿಸಲಾಗಿದೆ. ಇದರ ಬಳಕೆ ಶಿಕ್ಷಾರ್ಹ ಅಪರಾಧ, ನಿಯಮ ಮೀರಿದವರನ್ನು ಕಾನೂನು ಕ್ರಮವಹಿಸಲಾಗುವುದು.

13) ವಿದ್ಯಾರ್ಥಿಗಳು ಸೂಕ್ತ ಶುಲ್ಕ ನೀಡಿ ಒಮ್ಮೆ ಪ್ರವೇಶಾತಿಯಾದ ನಂತರ, ಯಾವುದಾದರೂ ಕಾರಣದಿಂದ ತಮ್ಮ ಪ್ರವೇಶಾತಿಯನ್ನು ರದ್ದುಮಾಡಿಸಿಕೊಂಡಲ್ಲಿ, ಅಂತಹ ವಿದ್ಯಾರ್ಥಿಗಳು ಪ್ರವೇಶಾತಿ ಸಮಯದಲ್ಲಿ ಪಾವತಿಸಿರುವ ಹಣವನ್ನೂ ಹಿಂತಿರುಗಿಸಲಾಗುವುದಿಲ್ಲ.

24/04/24

27/04/24

UNIVERSITYOF MYSORE

# Yuvaraja's College (Autonomous)

Mysuru – 570 005

**(Constituent Autonomous College with Potential for Excellence)**

## SECOND & FINAL YEAR UG ADMISSION FEE STRUTURE 2024-25

| ANNUAL FEES TO BE PAID FOR 2nd & 3rd YEAR B.Sc., BCA & BBA COURSEs FOR THE YEAR 2024-25 | | | | |
|---|---|---|---|---|
| **Course** | **Scheme** | **Karnataka State (Rs.)** | **Other State (Rs.)** | **Foreign Nationals (Rs.)** |
| **B.Sc.** | Scheme-A | 10,502/- | 10,502/- | 10,502/- |
| | Scheme-B | 35,502/- | 35,502/- | 35,502/- |
| **BCA** | Scheme-A | 22,502/- | 22,502/- | 22,502/- |
| | Scheme-B | 47,502/- | 47,502/- | 47,502/- |
| **BBA** | Scheme-A | 20,612/- | 20,612/- | 20,612/- |
| | Scheme-B | 45,612/- | 45,612/- | 45,612/- |

**Note:**

1) Under Scheme A & B Seats: The eligible SC/ST/Cat-1 students (Whose parents annual income is 2.50 lakh below ) and GM/IIA/IIB/IIIA/IIIB students (Whose parents annual income is 1.00 lakh below government) are enjoying the privileges of getting the full fee / partial fee concession in the form of scholarship from Social welfare department / Government of Karnataka / Government of India. The eligible admitted students are adviced to follow the instruction issued by the Social welfare department / Government of Karnataka and concerned department from time to time and apply for the scholarship. The Scholarship sanctioned by competent authority will be directly remitted to the concerned students account as per "Direct Benefit Transfer" (DBT) Scheme of Government of Karnataka / Government of India.

2) **The student who clears the prescribed full fee of the 1st year course will only be eligible for admission for the Second Year.**

3) **The student who clears the prescribed full fee of the 1st and 2nd year UG course will only be eligible for admission for the Final Year UG course.**

24/7/24